

# ಕಾಯುವುದೆಂದರೆ...

ಕಾಯುತ್ತಾ ಕಾಯುತ್ತಾ
ಏಕವಾಗಿರುವ ಅನೇಕದ
ಒಳ ಹೊರಗೆ ಶತಪಥ

ನದಿ ತಟದುದ್ದದ ನಡೆ
ಪುಟ್ಟ ಪಾದದಳತೆ
ಒಂದು ಪಾದದ ಬೆನ್ನೇರಿ
ಇನ್ನೊಂದು ಪಾದ
ಅದರ ಬೆನ್ನಿಗೇ
ಮತ್ತೊಂದು ಪಾದ...
ಕರುಳಿನಾಳದಿಂದೆದ್ದ ಸಂಕಟಕ್ಕೆ
ಹೆಜ್ಜೆಯೇ ಭಾರ.

ಊರಗಲ ಕಂಗಳು
ಮತ್ತಷ್ಟು ಹಿಗ್ಗಲಿಸಿ
ದೂರಕ್ಕೆ ದಿಟ್ಟಿ ಒಡ್ಡಿ
ನಕ್ಷತ್ರದೂರಿಗೆ ಪಯಣ.

ಪಾದ ಪಾತಾಳ!
ನೋಟಕ್ಕೇ ನೋವು
ಉಸಿರೂ ಭಾರ.

ಆ ಚಡಪಡಿಕೆ
ಹೇಳಲಾಗದು ತೋರಲಾಗದು
ಒಳಗೆಂದರೆ ಒಳಗಲ್ಲ
ಹೊರಗೆಂದರೆ ಹೊರಗೂ ಅಲ್ಲ!
ಹೊರಗು ಒಳಗಿಳಿಯುತ್ತಾ
ಒಳಗು ಹೊರಗಾಡುತ್ತಾ
ಉಸಿರು ಮತ್ತೆ
ಅಮಾಯಕ ಮಗುವಾಗುತ್ತಾ
ಆಟವಾಡುತ್ತಾ ಆಡುತ್ತಾ...
ಕಾಯುವುದೆಂದರೆ... ಹೀಗೆ.

● ರೂಪ ಹಾಸನ
ಕಲೆ: ಡಿ.ಕೆ. ರಮೇಶ್